


**ಗುರೂಜಿ ಕೃಷ್ಣಾನಂದ** (1939-2012)

### ಬೆಳಕು

ಇದು ಭೌತಿಕ ಮಟ್ಟದ ಬೆಳಕಲ್ಲ, ಅತ್ಯಂತ ಸೂಕ್ಷ್ಮ ಬೆಳಕು. ಈ ಬೆಳಕು ಎಲ್ಲ ಸೃಷ್ಟಿಯ ಮೂಲ. ಎಲ್ಲ ಸಕ್ರಿಯ ಶಕ್ತಿಗಳ ಮೂಲ. ಪ್ರೀತಿ, ಶಾಂತಿ, ಸತ್ಯ, ವಿವೇಕ ಮತ್ತು ಸಮಸ್ತ ಜೀವ ರಾಶಿಗಳ ಮೂಲ. ಈ ಬೆಳಕೇ ದೇವರು.

### ಚಾನಲಿಂಗ್

ಬೆಳಕನ್ನು ನಮ್ಮೊಳಗೆ ಪ್ರವೇಶಿಸುವಂತೆ ಉದ್ದೇಶಿಸಿ, ನಂತರ ಇಡೀ ಪ್ರಪಂಚಕ್ಕೆ ಹರಡುವಂತೆ ಮಾಡುವುದೇ ಚಾನಲಿಂಗ್. ನಮ್ಮ ಶರೀರ ಬೆಳಕಿನ ಅತ್ಯುನ್ನತ ತರಂಗಗಳನ್ನು ಸ್ಥೂಲ ಮಟ್ಟದ ತರಂಗಗಳಾಗಿ ಬದಲಾಯಿಸುತ್ತದೆ.

ಬೆಳಕಿನ ಕಂಪನಗಳು ಎಲ್ಲ ಜೀವಿಗಳನ್ನು ಮತ್ತು ಪ್ರಕೃತಿಯನ್ನು ತಲುಪುತ್ತವೆ. ಅವು ಹೀಲಿಂಗ್ ಚೈತನ್ಯಗಳನ್ನು, ಪ್ರೇಮ, ಶಾಂತಿ ಮತ್ತು ಸಕಾರಾತ್ಮಕತೆಗಳನ್ನು ಹೊಂದಿರುತ್ತವೆ. ಅವು ಪರಿವರ್ತನೆಗೆ ಸಹಾಯ ಮಾಡುತ್ತವೆ. ನಾವು ಉತ್ತಮ ಮಾನವ ಜೀವಿಗಳಾಗುತ್ತೇವೆ. ನಮ್ಮ ಪ್ರಪಂಚ, ಉತ್ತಮ ಪ್ರಪಂಚವಾಗುತ್ತದೆ.

### ತಂತ್ರ

ನಿಮ್ಮ ಮೇಲೆ ಬೆಳಕಿನ ಸಾಗರವಿದೆ ಎಂದು ಕಲ್ಪಿಸಿಕೊಳ್ಳಿ. ಬೆಳಕು ನಿಮ್ಮ ದೇಹದೊಳಕ್ಕೆ ಬಂದು ತುಂಬಿಕೊಂಡಂತೆ ಭಾವಿಸಿ. ನಂತರ ಬೆಳಕಿನಲ್ಲಿರುವ ಪ್ರೇಮ ಮತ್ತು ಶಾಂತಿಗಳನ್ನು ಒಂದು ನಿಮಿಷದವರೆಗೆ ಅನುಭವಿಸಿ. ಆ ಬೆಳಕು ಕ್ರಮೇಣ ನಿಮ್ಮ ಮನೆ, ಸುತ್ತಮುತ್ತಲ ಪ್ರದೇಶ, ದೇಶ ಮತ್ತು ಪ್ರಪಂಚಕ್ಕೆ ಹರಡಿದಂತೆ ಕಲ್ಪಿಸಿಕೊಳ್ಳಿ.

ಇದನ್ನು ಕನಿಷ್ಟ 7 ನಿಮಿಷ ಅಭ್ಯಾಸ ಮಾಡಿ.

### ಲೈಟ್ ಚಾನಲ್ಸ್ ವಿಶ್ವ ಸಂಚಲನ

ಈ ಸಂಚಲನವನ್ನು ಋಷಿಮಾರ್ಗದ ಸಂಸ್ಥಾಪಕರಾದ ಗುರೂಜಿ ಕೃಷ್ಣಾನಂದರವರು 18-05-2008 ರಂದು ಪ್ರಾರಂಭಿಸಿದರು.

ಈ ಸಂಚಲನವೆಂದರೆ ಬೆಳಕನ್ನು ಪ್ರತಿ ದಿನ ಏಳು ನಿಮಿಷಗಳವರೆಗೆ ಬೆಳಿಗ್ಗೆ ಎದ್ದಾಗ ಮತ್ತು ರಾತ್ರಿ ಮಲಗುವ ಮೊದಲು ನಮ್ಮ ನಮ್ಮ ಸ್ಥಳಗಳಿಂದಲೇ ಚಾನಲ್ ಮಾಡುವುದು.

ಈ ಸಂಚಲನದ ಗುರಿ ಮುಖ್ಯವಾಗಿ ಈ ಭೂಮಿಯ ಮೇಲೆ ಶಾಂತಿಯನ್ನು ತರುವುದು.

### ಸಂಚಲನದ ವೈಶಿಷ್ಟ್ಯತೆ

- ಬೆಳಕಿನಿಂದ ಏಕತೆ.
- ಇದು ಧಾರ್ಮಿಕ ಚಟುವಟಿಕೆಯಲ್ಲ. ವಿಶ್ವಾತ್ಮಕವಾದದ್ದು.
- ಇಲ್ಲಿ ಯಾವುದೇ ಕಟ್ಟುಪಾಡುಗಳಿಲ್ಲ.
- ಇಲ್ಲಿ ಸದಸ್ಯತ್ವವಿಲ್ಲ.
- ಶಾಂತಿ ನೆಲೆಸಲು ಪ್ರತಿಯೊಬ್ಬರೂ ನೆರವಾಗಬಹುದು.
- ಇದು ಪ್ರತಿ ವ್ಯಕ್ತಿಗೆ ಮತ್ತು ವಿಶ್ವಕ್ಕೆ ಸಹಾಯಕಾರಿ.
- ಹೊಸಯುಗಕ್ಕೆ ಪ್ರವೇಶಿಸಲು ಇದು ನಮ್ಮನ್ನು ಮತ್ತು ವಿಶ್ವವನ್ನು ಸಿದ್ಧಗೊಳಿಸುತ್ತದೆ.

# ಬೆಳಕಿನ ಸಂಚಲನ

ಸಂಪುಟ 11, ಸಂಚಿಕೆ 2 ದ್ವೈಮಾಸಿಕ ವಾರ್ತಾಪತ್ರ ಮಾರ್ಚ್–ಏಪ್ರಿಲ್ 2023

## ಒಂದು ಸಂದೇಶ

**ಗುರೂಜಿ ಕೃಷ್ಣಾನಂದ**

(ಗುರೂಜಿಯವರ ಭಾಷಣದ ಆಯ್ದ ಭಾಗಗಳು – ಮಾರ್ಚ್ 3, 1991)

**ಅನು: ಸುನಿಲ್ ಬಿ**

ನಾವೆಲ್ಲರೂ ನಮ್ಮ ಹಿಂದಿನ ಜನ್ಮಗಳ ಕರ್ಮಗಳ ಪರಿಣಾಮಗಳನ್ನು ಅನುಭವಿಸುತ್ತೇವೆ. ಇವುಗಳನ್ನು ಪ್ರಾರಬ್ಧ ಕರ್ಮಗಳೆಂದು ಕರೆಯುತ್ತಾರೆ. ತನ್ನ ಗೆಳೆಯನ ಕರ್ಮಗಳ ಪರಿಣಾಮವಾಗಿಯೂ ಒಬ್ಬ ವ್ಯಕ್ತಿ ಕಷ್ಟವನ್ನು ಅನುಭವಿಸಬಹುದು. ಇದನ್ನು ಪರೇಚ್ಛ ಕರ್ಮವೆನ್ನುತ್ತಾರೆ. ಸಾಮೂಹಿಕ ಕರ್ಮಗಳು ಆ ಕ್ಷೇತ್ರದ ಎಲ್ಲಾ ಜನರ ಮೇಲೆ ಪರಿಣಾಮ ಬೀರುತ್ತವೆ.

ಎಲ್ಲರಿಗೂ ಸಮಸ್ಯೆಗಳಿರುತ್ತವೆ. ಧ್ಯಾನದಲ್ಲಿ ಎಲ್ಲಾ ಸಮಸ್ಯೆಗಳಿಗೆ ಪರಿಹಾರವಿದೆ. ನಮ್ಮ ಹಿಂದಿನ ಜನ್ಮಗಳ ಹಾಗೂ ಈಗಿನ ಜನ್ಮದ ಕರ್ಮಗಳನ್ನು ಇದು ಸುಟ್ಟು ಹಾಕುತ್ತದೆ. ನಾವು ಧ್ಯಾನ ಮಾಡದಿದ್ದರೆ, ಸಮಸ್ಯೆಗಳನ್ನು ಅನುಭವಿಸಬೇಕಾಗುತ್ತದೆ.

ಯಾವುದೇ ಪರಿಸ್ಥಿತಿಯಲ್ಲಿ, ವಾಸ್ತವವನ್ನು ನಾವು ಶಾಂತಿ ಮತ್ತು ಸಂಯಮದಿಂದ ಸ್ವೀಕರಿಸಬೇಕು. ಹತಾಶೆ ಹಾಗೂ ಭಯದಿಂದ ದೂರವಿರಬೇಕು. ವರ್ತಮಾನವು ಅತಿ ಮುಖ್ಯ. ಯಾವುದೇ ಕಠಿಣ ಪರಿಸ್ಥಿತಿಯಲ್ಲಿ ನಮ್ಮ ಮಹಾನ್ ಋಷಿಗಳನ್ನು ನೆನೆಸಿಕೊಳ್ಳಿ. ಅವರಿಂದ ಒಂದು ನಿಶ್ಚಿತವಾದ ಪರಿಹಾರ ಸಿಗುತ್ತದೆ. ನಮ್ಮಲ್ಲಿ ನಂಬಿಕೆ ಹಾಗೂ ತಾಳ್ಮೆ ಇರಬೇಕು.

ನಾವು ಜೀವನದ ಉದ್ದೇಶವನ್ನರಿತುಕೊಳ್ಳಬೇಕು ಮತ್ತು ಅದನ್ನು ಅನುಸರಿಸಬೇಕು. ಆಗ, ಬೇರೆಲ್ಲ ವಿಷಯಗಳಿಗೆ ಪ್ರಾಮುಖ್ಯತೆ ಕಡಿಮೆಯಾಗುತ್ತದೆ. ನಮ್ಮ ಜೀವನದ ಉದ್ದೇಶವನ್ನು ಸಾಧಿಸಲು ದೇವರಲ್ಲಿ ಸಂಪೂರ್ಣ ಶರಣಾಗತಿ ಅತ್ಯಗತ್ಯ. ನಾವು ದೇವರಲ್ಲಿ ಶರಣಾಗಬೇಕು ಹಾಗೂ ನಂಬಿಕೆ ಇಡಬೇಕು. ದೇವರು ಸಹಾಯ ಮಾಡುತ್ತಾನೆ.

## ಘಟನಾವಳಿಗಳು

**ಜಯಂತ್ ದೇಶ್‌ಪಾಂಡೆ; ಅನು: ಸುನಿಲ್ ಬಿ**

ವಿಶ್ವದ ಅನುಗ್ರಹವನ್ನು ಪಡೆಯುವುದಕ್ಕಾಗಿ ನಾವು ಸಿದ್ಧರಾಗುವ ತನಕ ಪ್ರಾಯಶಃ ವಿಶ್ವವು ಕಾಯುತ್ತದೆ. ನಾವು ಸಿದ್ಧರಾದಾಗ, ಅದನ್ನು ಪಡೆಯಲು ಸಮ್ಮತಿಸಿದಾಗ, ವಿಶ್ವವು ತನ್ನ ಅನುಗ್ರಹವನ್ನು ಅಪಾರವಾಗಿ ಸುರಿಸುತ್ತದೆ. ವಿಶ್ವ ಚಾನಲ್ಸ್ ದಿನದಂದು ನಮಗೆ ಇದರ ಅನುಭವವಾಯಿತು; ಇಡೀ ದಿನ, ಅಪಾರವಾದ ಶಾಂತಿಯನ್ನು ಅನುಭವಿಸಿದೆವು.

ಈ ಜಗತ್ತು ಸ್ವೀಕರಿಸಲು ಸಿದ್ಧವಾದರೆ, ವಿಶ್ವವು ನಮಗೆ ಹೊಸ ಯುಗವನ್ನು ಉಡುಗೊರೆಯಾಗಿ ಕೊಡಲು ಇಚ್ಛಿಸುತ್ತದೆ. ವಿಶ್ವ ಚಾನಲ್ಸ್ ದಿನದಂದು ಚಾನಲ್ ಮಾಡಿದ ಬೆಳಕಿನ ಕಂಪನಗಳು, ಈ ಉಡುಗೊರೆಯನ್ನು ಪಡೆಯುವುದಕ್ಕಾಗಿ ಜಗತ್ತನ್ನು ಸಜ್ಜುಗೊಳಿಸಲು ಸಹಾಯ ಮಾಡುತ್ತವೆ. ಈ ಭರವಸೆ ಮತ್ತು ನಮ್ಮ ಮಾಸ್ಟರ್‌ಗಳ ದೂರದೃಷ್ಟಿಯಲ್ಲಿ ನಾವಿಟ್ಟಿರುವ ನಂಬಿಕೆ, ಈ ಬೆಳಕಿನ ಚಾನಲ್‌ಗಳ ಸಂಚಲನವನ್ನು ಹರಡುವುದಕ್ಕೆ ನಾವು ಮಾಡುವ ಪ್ರಯತ್ನಗಳನ್ನು ನಿರಂತರವಾಗಿ ಮುಂದುವರಿಸಲು ನಮ್ಮನ್ನು ಉತ್ತೇಜಿಸುತ್ತವೆ.

## ಬೆಳಕಿನ ಕ್ರಿಯಾಶಕ್ತಿ

**ಮನೋಜ್ ಚೋಪ್ರ; ಅನು: ಸುನಿಲ್ ಬಿ**

13ನೇ ವಿಶ್ವ ಚಾನಲ್ಸ್ ದಿನ ಒಂದು ಮರೆಯಲಾರದ ಅನುಭವವಾಗಿತ್ತು. ಆ ದಿನ ಬೆಳಕಿನಿಂದ ಪ್ರಾರಂಭವಾಗಿ, ಬೆಳಕಿನಲ್ಲಿ ಕೊನೆಗೊಂಡಿತು. ಶಾಂತಿಯನ್ನು ಹರಡುವ ಗುರಿಯನ್ನು ಹೊಂದಿರುವ ಎಲ್ಲರನ್ನೂ ಅದು ಒಟ್ಟುಗೂಡಿಸಿತು. ಇಂತಹ ಸಂದರ್ಭಗಳು ಹೃದಯಗಳ ಅಂತರವನ್ನು ನಿವಾರಿಸಿ ಸಾಮೂಹಿಕ ಗುರಿಯತ್ತ ಕೆಲಸ ಮಾಡಲು ನಮಗೆ ಸಹಾಯ ಮಾಡುತ್ತವೆ ಎಂದು ನಂಬುತ್ತೇನೆ. ಅದೊಂದು ಹರ್ಷತುಂಬಿದ ಹಾಗೂ ಆನಂದದ ದಿನವಾಗಿತ್ತು.

ಬಹಳ ಕಷ್ಟ ಪಟ್ಟು ಕೆಲಸ ಮಾಡಿದ ನಮ್ಮ ಕಾರ್ಯಕರ್ತರ ಪ್ರೀತಿಯು ನನ್ನ ಮನ ಮುಟ್ಟಿದೆ ಎಂದು ಪ್ರಾಮಾಣಿಕವಾಗಿ ಹೇಳುತ್ತೇನೆ. ನಮ್ಮ ಮಾಸ್ಟರ್‌ಗಳ ಬಗ್ಗೆ ಅವರಿಗಿರುವ ಸಮರ್ಪಣಾ ಭಾವ ಅದ್ಭುತವಾದುದು. ಎಲ್ಲಾ ಶಾಲಾ ಅಧಿಕಾರಿಗಳಿಂದ, ಶಿಕ್ಷಕರಿಂದ, ಮಕ್ಕಳಿಂದ, ಹಿರಿಯರಿಂದ ಹಾಗೂ ಬೆಳಕಿನ ಚಾನಲ್‌ಗಳಿಂದ ನಮಗೆ ಸಿಕ್ಕಿದ ಅಗಾಧವಾದ ಪ್ರತಿಕ್ರಿಯೆಯನ್ನು ಕಂಡು ನಾವು ಮೂಕವಿಸ್ಮಿತರಾದೆವು; ವಿಶ್ವ ಚಾನಲ್ಸ್ ದಿನದಂದು ಬೆಳಕನ್ನು ಚಾನಲ್ ಮಾಡುವುದರ ಮೂಲಕ ಅವರು ನಮ್ಮನ್ನು ಬೆಂಬಲಿಸಿದರು.

**ಮಾನಸ ಫೌಂಡೇಶನ್ (ರಿ)**
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ), ಬೆಂಗಳೂರು-560077, ಭಾರತ.
ಫೋನ್: (080) 2846 5280, 99000 75280 (10am to 5pm), ಇ-ಮೇಲ್: info@lightagemasters.com
website : www.lightagemasters.com, www.lightchannels.com

## ಬೆಳಕಿನ ಮಾಸ್ಟರ್‌ಗಳ ವಿವೇಕವಾಣಿ

### ಗುರೂಜಿ ಕೃಷ್ಣಾನಂದ; ಅನು: ಕೀರ್ತಿ ಬಿ

- ದೇವರಲ್ಲಿ ಶ್ರುತಿಗೊಂಡು ಇಪ್ಪತ್ನಾಲ್ಕು ಗಂಟೆಗಳನ್ನೂ, ಇಡೀ ಜೀವನವನ್ನೂ, ದೈವೀಕ ಪ್ರಜ್ಞೆಯಲ್ಲಿ ಬದುಕುವುದೇ ಯೋಗ.
- ಶಾಂತಿ, ಆನಂದ ಹಾಗೂ ಸಂತೋಷವನ್ನು ಪಡೆಯಲು ನಾವು ಧ್ಯಾನವನ್ನು ಆಯ್ಕೆ ಮಾಡಿಕೊಳ್ಳುತ್ತೇವೆ. ಎಲ್ಲರೊಂದಿಗೆ ಸಾಮರಸ್ಯದ ಸಂಬಂಧಗಳನ್ನು ಸ್ಥಾಪಿಸಿಕೊಂಡಾಗ ಮಾತ್ರವೇ ನಾವು ಇವುಗಳನ್ನು ಸಾಧಿಸಬಹುದು. ಮತ್ತೊಬ್ಬರ ಮನಃಸ್ಥಿತಿಗೆ ಮಾನ್ಯತೆ ಮತ್ತು ಗೌರವ ಕೊಟ್ಟು, ಅವರ ಮಟ್ಟಕ್ಕೆ ಇಳಿದು, ಅವರನ್ನು ಅರ್ಥ ಮಾಡಿಕೊಂಡು ಸಹಾನುಭೂತಿ ತೋರಿಸಬೇಕು.
- ಪ್ರತಿ ನಕಾರಾತ್ಮಕ ಯೋಚನೆ ಹಾಗು ಭಾವನೆ ಅಜ್ಞಾನದ ಇನ್ನೊಂದು ಪದರವನ್ನು ಸೇರಿಸುತ್ತದೆ.
- ನಮ್ಮ ಕಂಪನಗಳನ್ನು ದಿವ್ಯ ಕಂಪನಗಳ ಜೊತೆ ಶ್ರುತಿಗೊಳಿಸುವುದೇ ಯೋಗ.
- ಅಧ್ಯಾತ್ಮಿಕತೆ ಎಂದರೆ ಉಪವಾಸದಿಂದಿರುವುದಲ್ಲ, ಜೀವನವನ್ನು ನಿರಾಕರಿಸಿ ಒಂದು ಮೂಲೆಯಲ್ಲಿ ಕುಳಿತುಕೊಂಡು ಜಗತ್ತನ್ನು ದೂರಮಾಡುವುದಲ್ಲ ಅಥವಾ ಬಡತನದಲ್ಲಿ ಬದುಕುವುದಲ್ಲ. ಅಧ್ಯಾತ್ಮಿಕತೆ ಎಂದರೆ ಜೀವನವನ್ನು ಪೂರ್ತಿಯಾಗಿ ಹಾಗೂ ಸಂಪೂರ್ಣವಾಗಿ ಅನುಭವಿಸುವುದು.
- ಪ್ರಳಯ ಎಂದರೆ ವಿನಾಶವಲ್ಲ, ಬದಲಾವಣೆ; ಅದು ಭಾವನೆಗಳನ್ನು ಮತ್ತು ಆಲೋಚನೆಗಳನ್ನು ಪರಿವರ್ತಿಸುವ ಪ್ರಕ್ರಿಯೆ. ಪ್ರಳಯವೆಂದರೆ ಮಂಥನದ ಪ್ರಕ್ರಿಯೆ. ಅದು ಉನ್ನತ ಪ್ರಜ್ಞೆಗೆ ಸ್ಥಿತ್ಯಂತರಗೊಳ್ಳುವುದು. ಅದು ಪರಿವರ್ತನೆ.
- ಪವಾಡ ಮಾನವನಿಂದ ಸಾಧ್ಯವಿಲ್ಲ. ಅದು ಭಗವಂತನಿಂದ ಮಾತ್ರ ಸಾಧ್ಯ.
- ಪೂಜೆಯೆಂದರೆ ಭಗವಂತನಿಗೆ ನಮ್ಮ ಪ್ರೀತಿ ಮತ್ತು ಗೌರವವನ್ನು ಅರ್ಪಿಸುವುದು. ನಾವು ಯಾವಾಗಲೂ ದೇವರ ಇರುವಿಕೆಯ ಅರಿವಿನಲ್ಲಿರಬೇಕು; ಅವನನ್ನು ಅನುಭವಿಸಲು ಪ್ರಯತ್ನಿಸಬೇಕು. ಅನಂತತೆ, ಅಗಾಧತೆ ಹಾಗೂ ಪ್ರೀತಿಯ ರೂಪದಲ್ಲಿ ದೇವರನ್ನು ನಾವು ಅನುಭವಿಸಬಹುದು. ನಮಗೆ ಈ ಅನುಭವದಲ್ಲಿಯೇ ಉಳಿಯಲು ಸಾಧ್ಯವಾದರೆ ಆಗ ನಾವು ದೇವರನ್ನು ಪೂಜಿಸುತ್ತಿರುತ್ತೇವೆ.
- ಪ್ರೀತಿಯಲ್ಲಿ ಮೊದಲು ಬರುವುದೇ ಕ್ಷಮೆ. ಯಾವಾಗಲೂ ಎಲ್ಲರನ್ನೂ ಕ್ಷಮಿಸಬೇಕು. ಇದು ಸುಲಭವಲ್ಲ. ಕೆಲವು ಸಂದರ್ಭಗಳಲ್ಲಿ ನಾವು ಕಠಿಣವಾಗಿರಬೇಕಾಗುತ್ತದೆ. ಯಾರಿಂದಾದರೂ ತಪ್ಪು ನಡೆದಿದ್ದರೆ, ಅದನ್ನು ಅವರಿಗೆ ತಿಳಿಸಿ ನಮ್ಮ ಅಸಮಾಧಾನವನ್ನು ವ್ಯಕ್ತಪಡಿಸಬೇಕು. ಆದರೆ ನಕಾರಾತ್ಮಕ ಯೋಚನೆಗಳನ್ನು ನಮ್ಮ ಹೃದಯದಲ್ಲಿ ಉಳಿಸಿಕೊಳ್ಳಬಾರದು.
- ಅಗಾಧತೆ ಹಾಗೂ ದೊಡ್ಡತನ ಎಲ್ಲಾ ಮಟ್ಟಗಳಲ್ಲಿಯೂ ಇರಬೇಕು. ಯೊಚನಾ ಮಟ್ಟದಲ್ಲಿ ನಾವು ಯಾವಾಗಲೂ ದೊಡ್ಡದಾಗಿ ಯೋಚಿಸಬೇಕು. ಭಾವನಾ ಮಟ್ಟದಲ್ಲಿ ನಾವು ಯಾವಾಗಲೂ ದೊಡ್ಡಮಟ್ಟದಲ್ಲಿ ಸ್ಪಂದಿಸಬೇಕು.
- ಪುಸ್ತಕ ಜ್ಞಾನವು ಸಂಗೀತದ ಕ್ಷೇತ್ರದಿಂದ ಶುರುವಾಗಿ ಧ್ಯಾನದವರೆಗೆ, ಯಾವುದೇ ಕ್ಷೇತ್ರದ ಸ್ಥೂಲಚಿತ್ರದ ಅರಿವು ಮೂಡಿಸುತ್ತದೆ. ಆದರೆ, ವಾಸ್ತವವಾಗಿ ಆ ಜ್ಞಾನವನ್ನು ಕಾರ್ಯರೂಪಕ್ಕೆ ತಂದಾಗಲಷ್ಟೇ ಅದು ಸಂಪೂರ್ಣ ಜ್ಞಾನವಾಗುತ್ತದೆ.

## 13ನೇ ವಿಶ್ವ ಚಾನಲ್ಸ್ ದಿನದ ಆಚರಣೆ



ಪುಣೆಯ ಶಾಲೆಯೊಂದರ ವಿದ್ಯಾರ್ಥಿಗಳು 13ನೇ ವಿಶ್ವ ಚಾನಲ್ಸ್ ದಿನವಾದ ಫೆಬ್ರುವರಿ 1, 2023ರಂದು ಲೈಟ್ ಚಾನಲ್ ಮಾಡುತ್ತಿರುವುದು.



ಬೆಂಗಳೂರಿನ ಶಾಲೆಯೊಂದರ ವಿದ್ಯಾರ್ಥಿಗಳು ಫೆಬ್ರುವರಿ 1, 2023ರಂದು ನಡೆದ 13ನೇ ವಿಶ್ವ ಚಾನಲ್ಸ್ ದಿನದ ಆಚರಣೆಯಲ್ಲಿ ಭಾಗವಹಿಸಿದರು.



13ನೇ ವಿಶ್ವ ಚಾನಲ್ಸ್ ದಿನದ ಯಶಸ್ಸಿನ ಸಂಭ್ರಮಾಚರಣೆಯಲ್ಲಿ ಭಾಗವಹಿಸಿದ ಕಾರ್ಯಕರ್ತರು

# 13ನೇ ವಿಶ್ವ ಚಾನೆಲ್ಸ್ ದಿನ – ಒಂದು ವರದಿ

ಮನೋಜ್ ಕುಮಾರ್ ಚೋಪ್ರ; ಅನು: ಕಾಂಚನಲತಾ

ಆಫ್ರಿಕಾ ದೇಶದ ಒಂದು ಪ್ರಸಿದ್ಧ ಗಾದೆ ಮಾತು ಹೀಗಿದೆ: "ನೀನು ವೇಗವಾಗಿ ಹೋಗಬೇಕಾದರೆ, ಒಂಟಿಯಾಗಿ ಹೋಗು. ನೀನು ದೂರ ಕ್ರಮಿಸಬೇಕಾದರೆ, ಗುಂಪಿನಲ್ಲಿ ಹೋಗು." ಇದು, ಜಾಗತಿಕ ಗುರಿಯೊಂದನ್ನು ಒಟ್ಟಿಗೆ ಸಾಧಿಸಲು ಏಕತೆಯಲ್ಲಿ ಶ್ರಮಿಸಿದ ನಮ್ಮ ತಂಡಕ್ಕೆ ಸಂಪೂರ್ಣವಾಗಿ ಹೊಂದುತ್ತದೆ. ನಾವು ಜೊತೆಗೂಡಿ ಶ್ರಮವಹಿಸಿದರೆ ಮಾತ್ರವೇ, ಅದನ್ನು ದೊಡ್ಡದಾಗಿ ಸಾಧಿಸಬಹುದು. ನಮ್ಮ ಈ ಪಯಣದಲ್ಲಿ ಅನೇಕ ತೊಂದರೆಗಳನ್ನು ನಾವು ಎದುರಿಸಬೇಕಾಗಬಹುದು ಎನ್ನುವುದನ್ನು ನಾವು ಅರಿತುಕೊಳ್ಳಬೇಕು. ಆದರೆ ಒಂದು ತಂಡವು ಒಟ್ಟಾಗಿ ಅಪೇಕ್ಷಿಸಿದಾಗ, ಅಂತಿಮವಾಗಿ ದೊಡ್ಡ ಯಶಸ್ಸನ್ನು ಕಾಣಬಹುದು.

13ನೇ ವಿಶ್ವ ಚಾನೆಲ್ಸ್ ದಿನವು ಬಹಳ ಯಶಸ್ವಿಯಾಯಿತು. 1400 ಶಾಲೆಗಳಿಂದ 6 ಲಕ್ಷಕ್ಕೂ ಹೆಚ್ಚು ಮಕ್ಕಳು ಮತ್ತು ಆನ್ ಲೈನ್ ಸೆಷನ್‌ಗಳಲ್ಲಿ ಸಾವಿರಾರು ವಯಸ್ಕರು, ಲೈಟ್ ಚಾನೆಲ್ ಮಾಡಿದರು. "ಮಾನಸ ಕುಟುಂಬವು" ಒಂದು ತಂಡವಾಗಿ ಜೊತೆಯಾಗಿ ಕೆಲಸ ಮಾಡಿ ಎಲ್ಲಾ ಅಡಚಣೆಗಳನ್ನೂ ದಾಟಿದ್ದು ನನಗೆ ಸಂತೋಷ ತಂದಿದೆ. ಅಂತಹ ಪ್ರಸಂಗಗಳು ನಮ್ಮ ಸತತ ಪ್ರಯತ್ನ ಮತ್ತು ತಾಳ್ಮೆಗೆ ಒಡ್ಡಿದ ಪರೀಕ್ಷೆಗಳಾಗಿರುತ್ತವೆ ಎಂದು ನನಗನಿಸುತ್ತದೆ. ನನ್ನ ಅಭಿಪ್ರಾಯದಲ್ಲಿ, ನಮ್ಮ ಮಾಸ್ಟರ್‌ಗಳ ಅನುಗ್ರಹವಿಲ್ಲದೆ ಮತ್ತು ವಿಶ್ವದ ಪ್ರೀತಿಯಿಲ್ಲದೆ ಇಂತಹ ಯಶಸ್ಸನ್ನು ನಾವು ಸಾಧಿಸಲು ಸಾಧ್ಯವಾಗುತ್ತಿರಲಿಲ್ಲ.

ವಿಶ್ವ ಚಾನೆಲ್ಸ್ ದಿನದ ತಯಾರಿಯು ಒಂದು ತಿಂಗಳ ಮೊದಲೇ ಆರಂಭವಾಯಿತು. ನಮ್ಮ ಕಾರ್ಯಕರ್ತರು ಶಾಲೆಗಳನ್ನು ಭೇಟಿ ಮಾಡಿ, ಅವರನ್ನು ವಿಶ್ವ ಚಾನೆಲ್ಸ್ ದಿನದಲ್ಲಿ ಭಾಗವಹಿಸುವುದಕ್ಕೆ ಆಹ್ವಾನಿಸುವುದರಲ್ಲಿ ನಿರತರಾಗಿದ್ದರು. ನಮ್ಮ ಪ್ರಾದೇಶಿಕ ಸಂಯೋಜಕರು ಯೋಜನೆಗಳನ್ನು ರೂಪಿಸುವ, ಸಭೆ ನಡೆಸುವ ಮತ್ತು ಸ್ಥಳಗಳ ಹಂಚಿಕೆಯಲ್ಲಿ ನಿರತರಾಗಿದ್ದರು. ನಮ್ಮ ತಾಂತ್ರಿಕ ತಂಡವೂ ಕೂಡಾ ಶಾಲೆಗಳಿಗಾಗಿ ಲೈಟ್ ಚಾನೆಲಿಂಗ್‌ನ ಕಿರು ವಿಡಿಯೋಗಳನ್ನು ತಯಾರಿಸುವ ಕೆಲಸದಲ್ಲಿ ತೊಡಗಿಕೊಂಡಿದ್ದರು. ವಿಡಿಯೋಗಳನ್ನು ಇಂಗ್ಲಿಷ್, ಕನ್ನಡ, ಮರಾಠಿ ಮತ್ತು ಹಿಂದಿ ಭಾಷೆಗಳಲ್ಲಿ ರೆಕಾರ್ಡ್ ಮಾಡಲಾಯಿತು ಮತ್ತು ಅವುಗಳನ್ನು ನೂರಾರು ಶಾಲೆಗಳಿಗೆ ಕಳುಹಿಸಲಾಯಿತು. ಹಲವಾರು ಶಾಲೆಗಳವರು ಈ ನಮ್ಮ ಪ್ರಯತ್ನವನ್ನು ಶ್ಲಾಘಿಸಿದರು ಮತ್ತು ಈ ವಿಡಿಯೋಗಳನ್ನು ವಿಶ್ವ ಚಾನಲ್ಸ್ ದಿನದಂದು ಲೈಟ್ ಚಾನಲಿಂಗ್ ಸೆಷನ್‌ಗಳನ್ನು ನಡೆಸಲು ಬಳಸಿಕೊಂಡರು.

ಪ್ರತಿ ವರ್ಷದಂತೆ, ನಮ್ಮ ತಂಡದ ಸದಸ್ಯರು ತಮ್ಮ ಆ ದಿನವನ್ನು ಮುಂಜಾನೆ 6 ಗಂಟೆಗೆ, ನಮ್ಮ ಮಾಸ್ಟರ್‌ಗಳಿಗೆ ಪ್ರಾರ್ಥನೆ ಮತ್ತು ಚೈತನ್ಯಗಳನ್ನು ಅರ್ಪಿಸುವ ಮೂಲಕ ಆರಂಭಿಸಿದರು. ನಂತರ ತಮ್ಮ ತಮ್ಮ ನಿಗದಿತ ಸ್ಥಳಗಳಿಗೆ ತೆರಳಲು ಆರಂಭಿಸಿದರು – ಕೆಲವು ಸೆಷನ್‌ಗಳು ಯಾವಾಗಲೂ ಬೆಳಿಗ್ಗೆ ಬೇಗನೇ ನಡೆಯುತ್ತವೆ. ನಮ್ಮ ಮೊದಲನೇ ಆನ್‌ಲೈನ್ ಸೆಷನ್ ಬೆಳಿಗ್ಗೆ 8 ಗಂಟೆಗೆ ಪ್ರಾಂಭವಾಯಿತು, ನಂತರ ಮಧ್ಯಾಹ್ನ 12 ಗಂಟೆಗೆ, ಸಂಜೆ 6 ಗಂಟೆಗೆ ಹಾಗೂ ಕೊನೆಯ ಸೆಷನ್ ರಾತ್ರಿ 9 ಗಂಟೆಗೆ ನಡೆದವು. ಇಡೀ ದಿನದಲ್ಲಿ ಸಾವಿರಾರು ಸೆಷನ್‌ಗಳು ಏಕಕಾಲದಲ್ಲಿ ಜರುಗುತ್ತಿದ್ದವು. ಆನ್‌ಲೈನ್ ಸೆಷನ್‌ಗಳನ್ನು ನಮ್ಮ ವೆಬ್‌ಕಾಸ್ಟ್ ತಂಡವು ನಡೆಸಿಕೊಟ್ಟಿತು. ಒಟ್ಟಿಗೆ ಕೆಲಸ ಮಾಡಿದ ಅನುಭವ ಅದ್ಭುತವಾಗಿತ್ತು. ಒಂದು ದಿನ ಪೂರ್ತಿಯಾಗಿ ಋಷಿಗಳಿಗಾಗಿ ಕೆಲಸ ಮಾಡುವುದು ನಾವು ಮಾನವ ಕುಲಕ್ಕೆ ನೀಡಬಹುದಾದ ಅತ್ಯುತ್ತಮ ಉಡುಗೊರೆ ಎಂದು ನಾನು ಭಾವಿಸುತ್ತೇನೆ.

ಈ ವರ್ಷ, ಕರ್ನಾಟಕ, ತಮಿಳುನಾಡು, ಮಹಾರಾಷ್ಟ್ರ, ಹೈದರಾಬಾದ್, ಉತ್ತರ ಪ್ರದೇಶ, ಮಧ್ಯಪ್ರದೇಶ, ನವ ದೆಹಲಿ ಮತ್ತು ಅಮೃತ್‌ಸರದ ವಿವಿಧ ಭಾಗಗಳಲ್ಲಿ ಲೈಟ್ ಚಾನೆಲ್ ಮಾಡಲು ನಮಗೆ ಸಾಧ್ಯವಾಯಿತು. ಮಲೇಷಿಯಾ ದೇಶದಲ್ಲಿ ಆನ್ ಲೈನ್ ಸೆಷನ್ ಅನ್ನು ನಡೆಸಲು ಸಾಧ್ಯವಾಯಿತು. ಭಾರತ ಮತ್ತು ಪ್ರಪಂಚದ ಅನೇಕ ಭಾಗಗಳಿಂದ ಸಾವಿರಾರು ಜನರು ನಮ್ಮ ಆನ್ ಲೈನ್ ಸೆಷನ್‌ಗಳಲ್ಲಿ ಭಾಗವಹಿಸಿದರು. ಅನೇಕರು ನಮ್ಮ ಸೆಷನ್‌ಗಳಲ್ಲಿ ಅನನ್ಯವಾದ ಶಾಂತಿ ಮತ್ತು ಆನಂದದ ಅನುಭವವನ್ನು ಪಡೆದರು. ಕೊನೆಯ ಆನ್‌ಲೈನ್ ಸೆಷನ್ ರಾತ್ರಿ 9.30ಕ್ಕೆ ಮುಕ್ತಾಯಗೊಂಡ ನಂತರ, ಸಂತೋಷಮಯವಾದ ಮತ್ತು ಆನಂದಮಯವಾದ ದಿನವು ಕೊನೆಗೊಂಡಿತು.

ಪ್ರಪಂಚದಲ್ಲಿ ಯಾವುದೇ ರೀತಿಯ ಬದಲಾವಣೆಗಳು ಕೂಡಲೇ ಆಗದಿದ್ದಲ್ಲಿ ನಾವು ನಿರಾಶರಾಗಬಾರದು. ಯಾವುದೇ ಬದಲಾವಣೆಗೆ ಸಮಯ ಬೇಕಾಗುತ್ತದೆ. ಪ್ರಪಂಚವು ಬದಲಾಗುವ ಮುನ್ನ, ನಮ್ಮಲ್ಲಿ ನಾವು ಬದಲಾವಣೆಯನ್ನು ತಂದುಕೊಳ್ಳಬಹುದು. ನಾವು ಏನನ್ನು ಹೊಂದುತ್ತೇವೆಯೋ ಅದರ ಪರಿಣಾಮ ಜಗತ್ತಿಗೆ ಖಂಡಿತವಾಗಿ ಆಗುತ್ತದೆ. ಲೈಟ್ ಚಾನೆಲ್‌ಗಳಿಂದ ಆರಂಭಗೊಂಡ ಬದಲಾವಣೆಗಳು ಮುಂಬರುವ ದಿನಗಳಲ್ಲಿ ಖಂಡಿತಾ ಪರಿಣಾಮವನ್ನು ಬೀರುತ್ತವೆ ಎಂದು ನಾನು ನಂಬಿದ್ದೇನೆ. ಶಾಲಾ ಆಡಳಿತವರ್ಗಗಳಿಗೆ, ಮಕ್ಕಳಿಗೆ, ವಯಸ್ಕರಿಗೆ ಮತ್ತು ನಮ್ಮನ್ನು ಬೆಂಬಲಿಸಿದ ಹಾಗೂ ನಮ್ಮ ಸಂಚಲನವನ್ನು ಬಲಪಡಿಸಿದ ಎಲ್ಲಾ ಲೈಟ್ ಚಾನೆಲ್‌ಗಳಿಗೂ ನಾನು ಕೃತಜ್ಞನಾಗಿದ್ದೇನೆ. ■

## ಶಾಲೆಗಳಿಗೊಂದು ಮನವಿ

ನಿಮ್ಮ ತರಗತಿಗಳ ಪ್ರಾರಂಭದಲ್ಲಿ ಪ್ರತಿನಿತ್ಯ 3–7 ನಿಮಿಷಗಳ ಕಾಲ ಬೆಳಕನ್ನು ಚಾನಲ್ ಮಾಡಿಸುವುದರ ಮೂಲಕ ಲೈಟ್ ಚಾನಲ್ಸ್ ವಿಶ್ವ ಸಂಚಲನವನ್ನು ಬಲಗೊಳಿಸಲು ಸಹಾಯ ಮಾಡಿ.


## ಶಾಲೆಗಳಲ್ಲಿ ಲೈಟ್ ಚಾನಲಿಂಗ್

| | | |
|---|---|---|
| ಭಾಗವಹಿಸಿದ ಶಾಲೆಗಳ ಸಂಖ್ಯೆ | : | 5811 |
| ಲೈಟ್ ಚಾನಲ್ ಮಾಡಿರುವ ವಿದ್ಯಾರ್ಥಿಗಳ ಸಂಖ್ಯೆ | : | 29.88 ಲಕ್ಷ |

ನಿಮ್ಮ ಕುಟುಂಬದ ಸದಸ್ಯರು ಹಾಗೂ ಸ್ನೇಹಿತರೊಂದಿಗೆ ಈ ವಾರ್ತಾಪತ್ರವನ್ನು ಹಂಚಿಕೊಳ್ಳಿ. ಉಚಿತವಾದ PDF ರೂಪದ ಈ ವಾರ್ತಾಪತ್ರವನ್ನು ನಮ್ಮ ವೆಬ್‌ಸೈಟ್ www.lightchannels.com ನಿಂದ ಡೌನ್‌ಲೋಡ್ (download) ಮಾಡಿಕೊಳ್ಳಬಹುದು.

ಲಕ್ಷಾಂತರ ಜನರು ನಿಯತವಾದ ಲೈಟ್ ಚಾನಲಿಂಗ್ ಅಭ್ಯಾಸದಿಂದ ಪ್ರಯೋಜನಗಳನ್ನು ಪಡೆದಿದ್ದಾರೆ. ಅನೇಕರು ಸೋಜಿಗವೆನಿಸುವಂತಹ ಸಹಾಯವನ್ನು ಹಾಗೂ ಅದ್ಭುತವಾದ ಅನುಭವಗಳನ್ನು ಪಡೆದಿದ್ದಾರೆ. ನಿಮ್ಮ ಅನುಭವಗಳು ಇತರರಿಗೆ ಸ್ಫೂರ್ತಿ ನೀಡಬಹುದು ಹಾಗೂ ಮಾರ್ಗದರ್ಶನ ಕೂಡ ಮಾಡಬಹುದು. ದಯವಿಟ್ಟು ನಿಮ್ಮ ಅನುಭವಗಳನ್ನು ನಮ್ಮ ಜೊತೆ ಹಂಚಿಕೊಳ್ಳಿ. ನಮ್ಮ ಇ–ಮೇಲ್ info@lightagemasters.com ಗೆ ಬರೆಯಿರಿ.

ಅನೇಕ ಮಕ್ಕಳ, ಶಿಕ್ಷಕರ ಹಾಗೂ ಕಾರ್ಯಕರ್ತರ ಅನುಭವಗಳನ್ನು 'Experiences of Light Channels' ಎಂಬ ಪುಸ್ತಕದಲ್ಲಿ ಸಂಗ್ರಹಿಸಲಾಗಿದೆ. ಈ ಪುಸ್ತಕ ಹೊರತಂದ ಮೇಲೆ ಮತ್ತೆ ಅನೇಕರು ತಮ್ಮ ಅನುಭವಗಳನ್ನು ಹಂಚಿಕೊಂಡಾಗ, ಎರಡನೆಯ ಸಂಪುಟವನ್ನು ಹೊರ ತರಲಾಯಿತು. ಈ ಎರಡೂ ಸಂಪುಟಗಳನ್ನು ನಮ್ಮ ವೆಬ್‌ಸೈಟ್ www.lightagemasters.com ನಿಂದ ಉಚಿತವಾಗಿ ಡೌನ್‌ಲೋಡ್ (download) ಮಾಡಿಕೊಳ್ಳಬಹುದು.



# 13ನೇ ವಿಶ್ವ ಚಾನಲ್ಸ್ ದಿನದ ಅನುಭವಗಳು

**ಸಂ: ವೈಶಾಲಿ ಜೋಶಿ; ಅನು: ಸುಜಾತ ರಾಮರಾವ್**

ಈ ದಿನ (05-7-22), ಲೈಟ್ ಚಾನೆಲಿಂಗ್ ಕೆಲಸಕ್ಕಾಗಿ ಕೆಲವು ಶಾಲೆಗಳನ್ನು ಸಂಪರ್ಕಿಸಿದ ನಂತರ, ಮೊದಲ ಬಾರಿಗೆ ನನ್ನ ಜೀವನದಲ್ಲಿ ನಾನು ಜೀವಂತವಾಗಿದ್ದೇನೆ ಎಂದು ಅನಿಸಿತು. ಈ ಬದುಕು ಸಾರ್ಥಕವೆನಿಸಿತು. ಈ ಬೆಳಕಿನ ಯುಗದ ಸಂಚಲನದಲ್ಲಿ (Light Age Movement) ನಾನೂ ಒಂದು ಭಾಗವಾಗಿರಲು ಅವಕಾಶ ಕೊಟ್ಟಿದ್ದಕ್ಕಾಗಿ ಪದಗಳಿಗೆ ಮೀರಿದ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಅಪಾರವಾದ ಕೃತಜ್ಞತೆಯನ್ನು ನಿಮಗೆಲ್ಲ ಸಲ್ಲಿಸುತ್ತೇನೆ.

-ನಿಖಿಲ್ ಗಾಂಧಿ, ಲೈಟ್ ಚಾನೆಲ್ ಕಾರ್ಯಕರ್ತ

ಲೈಟ್ ಚಾನೆಲಿಂಗ್‌ನಿಂದ ನನಗೆ ಅರ್ಥವಾಗಿದ್ದೇನೆಂದರೆ ನಾವು ಖಿನ್ನತೆಗೆ ಒಳಗಾದಾಗ, ಇದನ್ನು ಅಭ್ಯಾಸ ಮಾಡಿ ಸ್ವಯಂ ಪ್ರೇರಿತರಾಗಬಹುದು. ಬದುಕಿನ ಯಾವುದೇ ಪರಿಸ್ಥಿತಿಯಲ್ಲೂ ನಮ್ಮನ್ನು ನಾವು ಪ್ರೇರೇಪಿಸಿಕೊಳ್ಳಬಹುದು ಮತ್ತು ನಮ್ಮ ಚೈತನ್ಯವನ್ನು ಮರಳಿ ಪಡೆಯಬಹುದು.

-ವಿದ್ಯಾರ್ಥಿ, ಗ್ರೀನ್‌ವುಡ್ ಹೈಸ್ಕೂಲ್, ವಾರಂಗಲ್

ಬೆಂಗಳೂರಿನ ಲಿಂಗರಾಜಪುರಮ್‌ನಲ್ಲಿರುವ ಜಿ.ಕೆ.ಎಮ್.ಪಿ ಶಾಲೆಯ 4ನೇ ತರಗತಿಗೆ ಲೈಟ್ ಚಾನೆಲಿಂಗ್ ಸೆಷನ್ ಮಾಡಿದ ನಂತರ, "ನಿಶ್ಯಬ್ದತೆ ಆವರಿಸಿತ್ತು ಮತ್ತು ಅದನ್ನು ನಾನು ಆನಂದಿಸಿದೆ" ಎಂದು ದಿನೇಶ್ ಎಂಬ ವಿದ್ಯಾರ್ಥಿಯು ಸ್ವಯಂಪ್ರೇರಣೆಯಿಂದ ಬಹಳ ಒತ್ತುಕೊಟ್ಟು ಹೇಳಿದನು. "ಮೊದಲು ಕತ್ತಲಿತ್ತು. ನಂತರ ಬೆಳಕು ಬಂತು" ಎಂದು ಇನ್ನೊಬ್ಬ ವಿದ್ಯಾರ್ಥಿ, ಶ್ರೀ ದೇವಿ ಹೇಳಿದಳು. ಆ ಸೆಷನ್ ಬಹಳ ಶಾಂತಿ-ಯುತವಾಗಿತ್ತು.


-ನಿರ್ಮಲ ಬಾಲ, ಲೈಟ್ ಚಾನೆಲ್ ಕಾರ್ಯಕರ್ತೆ

ನನ್ನ ಬದುಕು ನೀರಸವಾಗಿತ್ತು ಮತ್ತು ನನ್ನ ದಿನನಿತ್ಯದ ಬದುಕಿನ ಅನುಭವಗಳಿಂದ ನಾನು ಬಹಳ ಅಸಮಾಧಾನಗೊಂಡಿದ್ದೆ. ಆಗ ನನ್ನ ತಾಯಿ ನನಗೆ ನಿತ್ಯ ಎರಡು ಬಾರಿ, ಬೆಳಗ್ಗೆ ಮತ್ತು ರಾತ್ರಿ ಲೈಟ್ ಚಾನೆಲಿಂಗ್ ಮಾಡಲು ಹೇಳಿದರು. ಅದು ನನಗೆ ನೆಮ್ಮದಿ ನೀಡಿದೆ. ಈಗ ನನ್ನಲ್ಲಿ ಹೆಚ್ಚು ಚೈತನ್ಯವಿದೆ. ನನ್ನ ಕಛೇರಿಯಲ್ಲಿ ನಾನು ವೇಗದಿಂದ ಕೆಲಸ ಮಾಡಬಲ್ಲೆ. ದಿನ ಪೂರ್ತಿ ಒಳ್ಳೆಯ ಮನಸ್ಥಿತಿಯಲ್ಲಿ-ರುತ್ತೇನೆ. ನನ್ನ ಏಕಾಗ್ರತೆ ಬಹಳ ಹೆಚ್ಚಾಗಿದೆ.


-ಕೃಷ್ಣ ಅಭಿಷೇಕ್, ಲೈಟ್ ಚಾನೆಲ್

ಬೆಂಗಳೂರಿನ ಯಶವಂತಪುರದಲ್ಲಿರುವ ಎಲ್.ಸಿ.ಆರ್ ಸ್ಕೂಲ್‌ನಲ್ಲಿ ಆಗಸ್ಟ್ 18ರಂದು ನಾವು ಒಂದು ಲೈಟ್ ಚಾನೆಲಿಂಗ್ ಸೆಷನ್‌ಅನ್ನು ನಡೆಸಿದೆವು. ಶಿಕ್ಷಕಿಯೊಬ್ಬರು ಅವರ ಕಾಲಿನಲ್ಲಿ ಕೂದಲೆಳೆಯಷ್ಟು ಮೂಳೆಮುರಿತದಿಂದ ತೀವ್ರ ನೋವನ್ನು ಅನುಭವಿಸುತ್ತಿದ್ದರು. ಆದರೆ ಹೇಗೋ ಅವರು ಸೆಷನ್ ನಡೆಯುತ್ತಿದ್ದ ಅಸೆಂಬ್ಲಿ ಕೊಠಡಿಗೆ ಬಂದು ಕುಳಿತುಕೊಂಡರು. ಸೆಷನ್ ಕೊನೆಯಲ್ಲಿ, ನೋವಿನ ತೀವ್ರತೆ ಕಡಿಮೆಯಾಗಿತ್ತೆಂದು ಅವರು ಹೇಳಿದರು. ಅದ್ಭುತವಾದ ಸೆಷನ್‌ಗೆ ಅವರು ಕೃತಜ್ಞತೆಯನ್ನು ವ್ಯಕ್ತಪಡಿಸಿದರು. ಪ್ರಾಂಶುಪಾಲರು ಬಹಳ ಸಂತೋಷವಾಗಿದ್ದರು ಮತ್ತು ಪ್ರತಿ ಶನಿವಾರ ಶಾಲೆಗೆ ಭೇಟಿಕೊಡವಂತೆ ನಮ್ಮನ್ನು ವಿನಂತಿಸಿಕೊಂಡರು.

-ಚಂದ್ರಕಲಾ ಡಿ, ಲೈಟ್ ಚಾನೆಲ್ ಕಾರ್ಯಕರ್ತೆ



**6,00,000 ಕ್ಕೂಹೆಚ್ಚು ಜನರು 13ನೇ ವಿಶ್ವ ಚಾನಲ್ಸ್ ದಿನವಾದ ಫೆಬ್ರುವರಿ 1, 2023ರಂದು ಲೈಟ್ ಚಾನಲ್ ಮಾಡಿದರು**



**ಭಾಗವಹಿಸಿದ ನಿಮ್ಮೆಲ್ಲರಿಗೂ ಧನ್ಯವಾದಗಳು**

ಪ್ರತಿ 3ನೇ ಭಾನುವಾರದಂದು ನಡೆಯುವ ಮಾರ್ಗದರ್ಶಿತ ಲೈಟ್ ಚಾನಲಿಂಗ್ ಸೆಷನ್‌ನಲ್ಲಿ ಭಾಗವಹಿಸಬೇಕೆಂದು ಕೋರುತ್ತೇವೆ.
ಸಮಯ: ಬೆಳಿಗ್ಗೆ 11ರಿಂದ 11.30ರ ವರೆಗೆ
ನೇರ ಪ್ರಸಾರ: https://www.lightagemasters.com

**ನಿಮ್ಮನ್ನೂ ಹೀಲ್ ಮಾಡಿಕೊಳ್ಳಿ. ಪ್ರಪಂಚವನ್ನೂ ಹೀಲ್ ಮಾಡಿ.**

ಲೈಟ್ ಚಾನಲ್ಸ್ ಕನ್ನಡ ದ್ವೈಮಾಸಿಕ ಪತ್ರಿಕೆ, ಖಾಸಗಿ ಪ್ರಸಾರಕ್ಕಾಗಿ ಮಾತ್ರ. ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು: ಶ್ರೀದೇವಿ (ಮಾನಸ ಫೌಂಡೇಶನ್ (ರಿ) ಪರವಾಗಿ)
ಪ್ರಕಾಶನ ಸ್ಥಳ: ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ (ಹೆಣ್ಣೂರು-ಬಾಗಲೂರು ರಸ್ತೆ), ಬೆಂಗಳೂರು-560077
ಮುದ್ರಣ ಸ್ಥಳ: ಲೋಟಸ್ ಪ್ರಿಂಟರ್ಸ್ ಪ್ರೈ. ಲಿ., ಫೋನ್: 23380167 / 23209909, ಇಮೇಲ್: lotus.creation777@gmail.com, ವೆಬ್‌ಸೈಟ್: www.lotusprinters.com
ಮಾಲೀಕರು: ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ (ಹೆಣ್ಣೂರು-ಬಾಗಲೂರು ರಸ್ತೆ), ಬೆಂಗಳೂರು - 560077. ಸಂಪಾದಕರು: ಶ್ರೀದೇವಿ